'ಅವತ್ತು ಹಂಗೆ ಅವನ ಆ ಮಾತು ಪ್ರಪಾತಕ್ಕೆ ದೂಡಿದ ಹಂಗೆ ಅನ್ನಿಸಿತಲ್ಲ. ಬೀಳೋವಾಗ ಭಗ್ ಅಂತ ಒಂದು ಕಿಡಿ ಹೊತ್ತಿದ ಹಾಗೆ. ಆ ಕಿಡಿ ಹಂಗೆ ಸುತ್ತಲಿನ ಎಲ್ಲದರ ಮೇಲೆ ಒಂದು ಕ್ಷಣ ಝಗ್ ಅಂತ ಬೆಳಕಿನ ಪದರ ಹಾಸಿತು ಅಂದ್ರೆ. ಆ ಬೆಳಕು ಭಾಳ ದೂರದವರೆಗಿನದನ್ನೂ ಕಾಣಿಸಿತು. ಆಮೇಲೆ ಆ ಕಿಡಿ ಒಳಗೊಂದು ಲಾಟೀನು ಹೊತ್ತಿಸಿತು. ನನ್ನತ್ತೆ ಅವಳ ಮೊದಲನೇ ಬಾಣಂತನಕ್ಕೆ ಬಂದಿದ್ದಳು. ನಾನು ಆವಾಗ ಮೂರನೇ ಕ್ಲಾಸು. ಕೆಲವು ಸಲ ರಾತ್ರಿ ಊಟವಾದ ಮೇಲೆ ನಾನು, ಅವಳು ಅಂಗಳದಲ್ಲಿ ಓಡಾಡುತ್ತಿದ್ದೆವು. ಆವಾಗ ಒಂದ್ಸಲ ಬೀದಿದೀಪ ತೋರಿಸಿ, ಕೇಳಿದ್ದಳು. 'ಅಪ್ಪೂ. ಈ ಬೀದಿ ದೀಪ ನಮ್ಮ ಬೀದಿ ತುದೀವರೆಗೂ ನಿಂಗೆ ದಾರಿ ತೋರಿಸುತ್ತೆ. ಇನ್ನೊಂದು ಬೀದಿ ದೀಪ ಆ ಬೀದಿಯ ದಾರಿಯನ್ನು ಕಾಣಿಸುತ್ತೆ. ಎರಡೂ ಬೀದಿ ಸೇರೋ ಮೂಲೆ ಕತ್ತಲು ಇರುತ್ತೆ. ಆ ಮೂಲೆ ಕತ್ತಲು ದಾಟದೇ ನೀನು ಇನ್ನೊಂದು ಬೀದಿಯಲ್ಲಿ ನಡೆಯಕ್ಕಾಗಲ್ಲ. ಏನು ಮಾಡ್ತೀಯ?' 'ಓ ಏನು ಮಾಡದು?' ನಿಜ ಅಂದರೆ ನಂಗೆ ಅವಳು ಕೇಳಿದ್ದು ಪೂರ್ಣ ಅರ್ಥ ಆಗಿರಲಿಲ್ಲ. ಅವಳು ಏನು ಮಾಡ್ತೀಯ ಅಂತ ಕೇಳಿದ್ದಕ್ಕೆ ಏನು ಮಾಡದು ಅಂತ ಕೇಳಿದ್ದೆ ಅಷ್ಟೆ. 'ಆ ಕತ್ತಲ ಮೂಲೆ ಕಾಣಬೇಕು ಅಂದ್ರೆ ನೀನೇ ಒಂದು ಲಾಟೀನು ಹಚ್ಚಿಕೊಂಡು ಹಿಂಗೆ ನಡೀಬೇಕು.' ಅವಳು ಲಾಟೀನು ಹಿಡಿದು ನಡೆದಂತೆ ತೋರಿಸಿದಳು. ಅವಳು ಹೇಳಿದ್ದು ಅರ್ಥವಾಗದಿದ್ದರೂ ಆ ಎಲ್ಲ ವಾಕ್ಯಗಳು ಯಾಕೆ ನನ್ನೆದೆಯೊಳಗೆ ಊರಿ ಕೂತಿತು ಅಂದ್ರೆ ಅವಳು ಈ ಬೀದಿ ದೀಪ, ಆ ಬೀದಿ ದೀಪ ಅಂತ ಕೈ ಮಾಡಿ, ದಾರಿಯಲ್ಲಿ ನಡೆದಂತೆ, ಕತ್ತಲು ಮೂಲೆ ಕಂಡು ದಾರಿಗಾಣದೇ ನಿಂತಂತೆ ಎಲ್ಲ ಅಭಿನಯಿಸಿ ತೋರಿಸಿದ್ದಳು. ಆ ದಿನ ಅಂಗಳದಲ್ಲಿ ಬೀದೀಪದಿಂದ ಹಬ್ಬಿದ ಬೆಳಕು-ನೆರಳಿನ ವಿನ್ಯಾಸ, ಅವಳ ಉಬ್ಬಿದ ಹೊಟ್ಟೆ, ಹೊಳೆಯುತ್ತಿದ್ದ ಕಣ್ಣು, ಯಾವುದೂ ನನ್ನಿಂದ ಮರೆಯಾಗಲಿಲ್ಲ. ಆಮೇಲೆ ನಾನು ಅವಳ ಕೈ ಜಗ್ಗಿ ಕೇಳಿದೆ, 'ನೀನೂ ಹಂಗೆ ಲಾಟೀನು ಹಚ್ಚಿಕೊಳ್ತೀಯ ಅತ್ತೆ?' ಅವಳು ಥಟ್ಟನೆ ನಿಂತಳು.'ಈಗ ನನ್ನ ಹತ್ರ ಲಾಟೀನು ಇಲ್ಲ ಅಪ್ಪೂ. ಅದನ್ನ ಕಸಿದು, ಅಟ್ಟಕ್ಕೆ ಬಿಸಾಕಿದ್ರು. ನನಗೀಗ ಒಂದೇ ಬೀದಿ ಕಾಣದು. ನಿನ್ನ ಸ್ಕೂಲಿನ ಚೀಲ ಇದೆಯಲ್ಲ, ಅದ್ರಲ್ಲಿ ನಿನ್ನ ಲಾಟೀನು ಇರುತ್ತೆ' ಅತ್ತೆ ನನ್ನ ಹೆಗಲು ಮುಟ್ಟಿ, ಅಲ್ಲಿ ಸ್ಕೂಲು ಚೀಲ ಇದೆಯೇನೋ ಎಂಬಂತೆ ಕೈಯಲ್ಲಿ ತಟ್ಟಿ, 'ಇಲ್ಲಿ' ಎಂದಳು. 'ಹೌದಾ. ನಂಗೆ ಕಂಡೇ ಇಲ್ಲ. ನೀ ಸುಳ್ಳು ಹೇಳ್ತೀ.' 'ನಿಜ್ವ ಕಣೇ ಅಪ್ಪೂ. ನೀನು ಪ್ರತಿವರ್ಷ ಫಸ್ಟ್ ಕ್ಲಾಸ್ ಬಂದ್ರೆ ಅದೇ ನಿನ್ನ ಲಾಟೀನು' ಅತ್ತೆ ಹತ್ತಿರ ಎಲ್ಲದಕ್ಕೂ ಉತ್ತರ ಇರ್ತಿತ್ತು. ಎಂಥಾ ಅಂತಃಕರಣ ನನ್ನತ್ತೆಯದು ಅಂದ್ರೆ' ರಾಜೋ ನಿಡಿದಾಗಿ ಉಸಿರೆಳೆದುಕೊಂಡಳು.

'ಏನು ಇಬ್ಬರೂ ಹಿಂಗೆ ಕೂತಿದ್ದೀರಿ. ಊಟ ಬೇಡವಾ' ಎಂದು ನಗಲು ಪ್ರಯತ್ನಿಸಿದಳು. ವಿನುತಾ ಎದ್ದು ನಿಂತು,'ಆ ಚಿಕ್ಕಪ್ಪನಂಥ ಎಲ್ಲಾರಿಗೆ ನಂದೂ ಒಂದು ಫೂಫೂ. ಸಾಯ್ಲಿ ಅತ್ಲಾಗೆ' ಎಂದು ಕೈತೊಳೆಯಲು ಹೋದಳು. ಹೆಚ್ಚು ಮಾತಿಲ್ಲದೇ ಊಟ ಮುಗಿಸಿ, ಕೈತೊಳೆದು, ಎಲ್ಲ ಎತ್ತಿಟ್ಟು ಮತ್ತೆ ಮಾತಿಗೆ ಕುಳಿತರು.

ಮೇಗಲೆ ಆಫೀಸಿನಿಂದ ಟ್ರಿಪ್ ಹೋಗಿ ಬಂದಿದ್ದರ ಫೋಟೋ ತೋರಿಸತೊಡಗಿದಳು. ಇತ್ತೀಚೆಗೆ ವಾರಾಂತ್ಯದಲ್ಲಿಯೂ ಒಂದೋ ಎರಡೋ ಆಪ್ತಸಮಾಲೋಚನೆಯ ಕೇಸುಗಳು ಬೇರೆ ಸಿಗ್ತಾ ಇವೆ, ಯಾವುದಕ್ಕೂ ಪುರುಸೊತ್ತೆ ಇಲ್ಲ, ವಾಕಿಂಗ್ ಹೋಗಣ ಅಂದ್ರೂ ಆಗ್ತಿಲ್ಲ, ನೋಡು ದಪ್ಪ ಆಗಿಬಿಟ್ಟಿದ್ದೀನಿ ಎಂದು ಅಲವತ್ತುಕೊಂಡಳು.

'ಪಕ್ಕದಲ್ಲಿ ಇರೋರನ್ನ ನೋಡು ಮೇಗಲೆ. ಹಂಗೆ ಸೈಕ್ಲಿಂಗ್ ಮಾಡಿ, ಎರಡೇ ತಿಂಗಳಿನಲ್ಲಿ ಹೊಟ್ಟೆ ಸಪಾಟು ಮಾಡಿಕೊಂಡಿದಾರೆ' ರಾಜೋ ಕಿಚಾಯಿಸಿ, ನಕ್ಕಳು.

'ಅಯ್ಯೋ ರಾಮ. ನಿಂಗೆ ಹೆಂಗೇ ಗೊತ್ತಾಯ್ತು?' ತಾನು ಯಾವತ್ತೂ ಆಫೀಸಿನಲ್ಲಿಯೂ ಬಾಯಿಬಿಟ್ಟಿಲ್ಲ, ಇವಳಿಗೆ ಹೆಂಗೆ ಗೊತ್ತಾಯ್ತು. ವಿನುತಾ ಯೋಚಿಸುವಷ್ಟರಲ್ಲಿ, 'ರಮೇಶ ಸರ್ ನಾಕೈದು ಸಲ ರಂಗಶಂಕರದಲ್ಲಿ ಸಿಕ್ಕಿದ್ದರು ಎಂದೆನಲ್ಲ. ಹಿಂಗೇ ಮಾತಾಡ್ತಾ ವಿನೂ ತುಂಬ ಚೆನ್ನಾಗಿ ಸೈಕ್ಲಿಂಗ್ ಮಾಡ್ತಾಳೆ, ಸುಮಾರು ದೂರ ಹೋಗ್ತಾಳೆ ಅಂತೆಲ್ಲ ಭಾರೀ ಅಭಿಮಾನದಿಂದ ಹೇಳಿಕೊಂಡರಪ್ಪ. ಹೊಸಾ ಸೈಕಲ್ ಬೇರೆ ತಗಂಡೆಯಂತೆ. ನಮ್ ಹತ್ರ ಬಾಯಿ ಬಿಡಲೇ ಇಲ್ಲ' ರಾಜೋ ಹೇಳುತ್ತ ನಕ್ಕಳು.

'ಅಯ್ಯೋ, ಹೌದೇನೆ. ಯಾವುದೇ ವಾಹನ ಬಿಡಕ್ಕೆ ಬರದೇ ಇರೋಳು ನಾನೇ ನೋಡು ಈಗ' ಮೇಗಲೆ